ಶ್ರೀ ಕೆ.ಎನ್. ವೀರಪ್ಪಗೌಡ.—ಈಗ ಮಾನ್ಯ ಮಂತ್ರಿಗಳು ಹೇಳಿದರು, ಯಾರಾದರೂ ಮಂತ್ರಿಗಳು ಪ್ರವಾಸ ಹೋಗಬೇಕಾದರೆ ಸರ್ಕಾರದ ಕೆಲಸಕ್ಕೋಸ್ಕರ ಪ್ರವಾಸ ಹೋದರು. ಟಿ.ಎ. ಡಿ.ತಿ., ತೆಗೆದು ಕೊಳ್ಳುವ ಉದ್ದೇಶದಿಂದ ಅವರು ಪ್ರವಾಸ ಹೋಗಲಿಲ್ಲ ಎಂದು. ಇಂತಿಂಥಾ ಸರ್ಕಾರಿ ಕೆಲಸಕ್ಕೋಸ್ಕರ, ಅಥವಾ ಆಫೀಸುಗಳನ್ನು ಇನ್‌ಸ್ಪೆಕ್ಷನ್ ಮಾಡುವ ಬಗ್ಗೆ ಮಂತ್ರಿಗಳು ಪ್ರವಾಸ ಹೋಗುತ್ತಾರೆ ಎಂದು ಟೂರ್ ಪ್ರೋಗ್ರಾಮ್ ಇಷ್ಯೂ ಮಾಡುತ್ತಾರೆ. ಹೋಗುತ್ತಾರೆ. ಕೆಲವು ಸಂದರ್ಭಗಳಲ್ಲಿ ಒಂದೇ ತಾಲ್ಲೂಕಿಗೆ ೧೦ ಸಾರಿ ಪ್ರವಾಸ ಹೋಗುತ್ತಿರುತ್ತಾರೆ. ಇದು ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಎಚ್.ಎಂ. ಚನ್ನಬಸಪ್ಪ.—ಸಾಮಾನ್ಯವಾಗಿ ಯಾರಾದರೂ ಬಂದು ಪ್ರವಾಸ ಬನ್ನಿ ಎಂದು ಮಂತ್ರಿಗಳನ್ನು ಕರೆದರೆ ಆಗ ಅವರು ಹೋಗಬೇಕಾದ ನಿಯಮವಿಲ್ಲ. ಸಾಮಾನ್ಯವಾಗಿ ಸಣ್ಣ ಸಣ್ಣ ಕಾರ್ಯ ಕ್ರಮಗಳಿಗೆ ಹೋಗುವುದಿಲ್ಲ. ಯಾವುದಾದರೂ ಮುಖ್ಯವಾದ ಸಮಾರಂಭಗಳು ಬಂದಾಗ ಅಥ ಕಾರ್ಯಕ್ರಮಗಳಿಗೆ ಮಂತ್ರಿಗಳು ಒಪ್ಪಿಕೊಳ್ಳಬೇಕಾಗುತ್ತದೆ. ಸಾರ್ವಜನಿಕ ಸಮಾರಂಭಗಳಲ್ಲಿ ಸರ್ಕಾರದ ಕೆಲವು ಉದ್ದೇಶಗಳನ್ನು, ನೀತಿ ನಿಯಮಗಳನ್ನು ಸಾರ್ವಜನಿಕರಿಗೆ ಭಾಷಣದ ಮುಖಾಂತರ ತಿಳಿಸುವ ಅವಶ್ಯಕತೆ ಕೂಡ ಇರುತ್ತದೆ. ಈ ದೃಷ್ಟಿಯಿಂದ ಮಂತ್ರಿಗಳು ಪ್ರವಾಸ ಹೋಗಬೇಕಾಗುತ್ತದೆ.

ಶ್ರೀ ಕೋಣಂದೂರು ಲಿಂಗಪ್ಪ.—ಕೆಲವರು ಮಂತ್ರಿಗಳು ಸಾಧಾರಣವಾಗಿ ಆಗಾಗಲೂ ಪ್ರವಾಸ ದಲ್ಲಿಯೇ ಇರುತ್ತಾರೆ. ಅಂಥಾ ಮಂತ್ರಿಗಳ ಬಗ್ಗೆ ಸ್ವಲ್ಪ ಹಿಡಿತವನ್ನು ಇಟ್ಟುಕೊಳ್ಳುತ್ತೀರಾ ಈ ರೀತಿ ಯಾದ ಪ್ರವಾಸದಿಂದ ರಾಜ್ಯದ ಬೊಕ್ಕಸಕ್ಕೆ ಹೆಚ್ಚು ಹೊರೆಯಾಗದಂತೆ ಮಿತವ್ಯಯ ದೃಷ್ಟಿಯಿಂದ ಇದನ್ನು ಕಡಿಮೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ?

ಶ್ರೀ ಎಚ್.ಎಂ. ಚನ್ನಬಸಪ್ಪ.—ಅಂಥಾದ್ದು ಯಾವುದಾದರೂ ಕಂಡು ಬಂದರೆ ಅದನ್ನು ಖಂಡಿತ ವಿಚಾರ ಮಾಡತ್ತೇನೆ.

ಶ್ರೀ ಎಂ.ಬಿ. ರಾಮಸ್ವಾಮಿ.—ಮಂತ್ರಿಗಳು ಪ್ರವಾಸ ಮಾಡುವಾಗ ಒಂದು ತಿಂಗಳಲ್ಲಿ ಇಷ್ಟು ಕಡೆ ಮಾತ್ರ ಪ್ರವಾಸ ಮಾಡಬೇಕೆಂದೇನಾದರೂ ನಿಗದಿ ಮಾಡಲಾಗಿದೆಯೇ?

ಶ್ರೀ ಎಚ್.ಎಂ. ಚನ್ನಬಸಪ್ಪ.—ಸರ್ವೇ ಸಾಧಾರಣವಾಗಿ ಒಂದು ತಿಂಗಳಿನಲ್ಲಿ ೧೦ ದಿವಸಗಳಿಗೆ ಮೀರದಂತೆ ಪ್ರವಾಸ ನಿಯಮ ಇದೆ. ವಿಶೇಷ ಸಂದರ್ಭದಲ್ಲಿ, ಜರೂರು ಅವಶ್ಯಕತೆ ಇದ್ದರೆ, ಹೆಚ್ಚು ಪ್ರವಾಸ ಮಾಡಬಹುದು.

RISE IN THE PRICES OF RAW SILK

426. SRI K. M. NAGANNA (Chickpet):—

Will the Minister of State for Sericulture be pleased to state :—

(*a*) whether it has come to the notice of the Government that price of raw silk is going up abnormally in recent month ;

(*b*) whether it has come to the notice of the Government that on account of the high cost of raw silk, the weavers are finding it difficult to carry on their normal profession and experiencing great hardship;

(*c*) the steps taken by the Government to prevent the rise in price of raw silk ?

SRI S. B. NAGARAL (Minister of State for Sericulture) :—

(*a*) Yes.

(*b*) Yes. It is a temporary phase.

(*c*) Steps are being taken to set up a Raw Material Bank to fix a floor and ceiling price for Raw Silk.

ಶ್ರೀ ಕೆ. ಎಂ. ನಾಗಣ್ಣ.—(ಬಿ) ಪ್ರಶ್ನೆಗೆ "ಬಂದಿದೆ" ಎಂದು ಹೇಳಿದ್ದೀರಿ. ಅಂದರೆ ಬೆಲೆ ಜಾಸ್ತಿಯಾಗಿದೆ ಎಂದು ಒಪ್ಪಿಕೊಂಡಿದ್ದೀರಿ. ಈಗ ಸುಮಾರು ಒಂದು ವರ್ಷದಿಂದ ಬೆಲೆ ಬಹಳ ಜಾಸ್ತಿ ಯಾಗಿದೆ. ತಾವು ತಾತ್ಕಾಲಿಕ ಪರಿಸ್ಥಿತಿ ಉಂಟಾಗಿದೆ ಎಂದು ಹೇಳಿದ್ದೀರಿ. ಅದು ನನಗೆ ಅರ್ಥವಾಗುತ್ತಿಲ್ಲ.

(ಶ್ರೀ ಕೆ. ಎಂ. ನಾಗಣ್ಣ)

ಹೀಗೆ ಬೆಲೆ ಜಾಸ್ತಿಯಾಗಿರುವುದರಿಂದ ಹತ್ತಾರು ಸಾವಿರ ಜನ ನೇಕಾರ ಜನರು ಕೆಲಸವಿಲ್ಲದೆ ಅಲೆದಾಡುತ್ತಿದ್ದಾರೆ. ಅಂಥ ಜನರಿಗೆ ಬೇರೆ ಏನಾದರೂ ಕೆಲಸ ಒದಗಿಸಿಕೊಡುವುದಕ್ಕೆ ಸಾಧ್ಯವಿದೆಯೇ ?

† ಶ್ರೀ ಎಸ್. ಬಿ. ನಾಗರಾಳ .—ರೇಶ್ಮೆ ಧಾರಣೆ ಹೆಚ್ಚಾಗಿದೆ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆ. ಹುಟ್ಟುವಳಿ ಕಡಿಮೆಯಾದಾಗ ರೇಶ್ಮೆ ಧಾರಣೆ ಹೆಚ್ಚಾಗುತ್ತದೆ. ಮಾನ್ಯ ಸದಸ್ಯರು ರೇಶ್ಮೆ ಕೆಲಸ ಮಾಡುವ ಜನರು ಉದ್ಯೋಗವಿಲ್ಲದೆ ಅಲೆದಾಡುತ್ತಿದ್ದಾರೆಂದು ಹೇಳಿದರು. ಉದ್ಯೋಗ ಒದಗಿಸುವಂತಹ ವಿಷಯ ನನ್ನ ಖಾತೆಗೆ ಸಂಬಂಧಪಟ್ಟಿದ್ದಲ್ಲ. ಅದರ ಬಗ್ಗೆ ಮಾನ್ಯ ಕೈಗಾರಿಕಾ ಸಚಿವರಾದ ಕೃಷ್ಣರವರಿಗೆ ಪ್ರಶ್ನೆ ಹಾಕಿದರೆ ಕ್ರಮಗೆ ಉತ್ತರ ಹೇಳುವರು.

ಶ್ರೀ ಕೆ. ಎಂ. ನಾಗಣ್ಣ .—ಈಗ ಕಚ್ಚಾ ಪದಾರ್ಥಗಳ ಬ್ಯಾಂಕ್ ಒಂದನ್ನು ತೆರೆಯಲು ಕ್ರಮ ಗಳನ್ನು ಕೈಕೊಳ್ಳಲಾಗಿದೆ ಎಂದು ಹೇಳಿದ್ದೀರಿ. ಇದು ಯಾವ ಬ್ಯಾಂಕ್ ಮತ್ತು ಈ ಸೀಲಿಂಗ್ ಪ್ರೈಸ್ ಫಿಕ್ಸ್ ಮಾಡಿದರಲು ಕಾರಣವೇನು ?

ಶ್ರೀ ಎಸ್. ಬಿ. ನಾಗರಾಳ್ .—ಈ ರಾ ಮೆಟೀರಿಯಲ್ಸ್ ಬ್ಯಾಂಕನ್ನು ಕೇಂದ್ರ ಸರ್ಕಾರದವರು ಸೆಂಟ್ರಲ್ ಸಿಲ್ಕ್ ಬೋರ್ಡಿನ ಮುಖಾಂತರ ಈ ಸಿಲ್ಕ್ ಧಾರಣೆಯನ್ನು ಸೀಮಿತದಲ್ಲಿಟ್ಟುಕೊಳ್ಳಲು ತೆರೆಯಿಂದರು. ಕೊಂಡುಕೊಳ್ಳುವವರಿಗೂ ಬೆಳೆಯುವವರಿಗೂ ಅನ್ಯಾಯವಾಗಬಾರದು ಎಂದು ಈ ರೀತಿ ಮಾಡುತ್ತಿದ್ದಾರೆ. ಅದರ ಮುಖಾಂತರ ಧಾರಣೆ ಕಡಿಮೆಯಾದಾಗ ರೈತನ ಕಡೆಯಿಂದ ಕೊಂಡು ಕೊಂಡು, ಧಾರಣೆ ಹೆಚ್ಚಾದಾಗ ಕಾರ್ಪೊರೇಶನ್ ಕಡೆಯಿಂದ ಸಿಲ್ಕ್‌ನ್ನು ಬಿಡುಗಡೆ ಮಾಡತಕ್ಕಂತಹ ಒಂದು ಯೋಜನೆ ಇದೆ. ಅದು ಕಾರ್ಯಗತವಾದ ಕೂಡಲೇ ಇದರಿಂದ ಬಹಳ ಪ್ರಯೋಜನವಾಗುತ್ತದೆಂಬು ನಾನು ತಿಳಿದಿದ್ದೇನೆ.

ಶ್ರೀ ಟಿ. ಆರ್. ತಾಮಣ್ಣ .—ಈಗ ರಾ ಸಿಲ್ಕ್ ಬೆಲೆ ಜಾಸ್ತಿಯಾಗಿರುವುದರಿಂದ ಸಿಲ್ಕ್ ಸೀರೆಗಳ ಬೆಲೆಯೂ ಜಾಸ್ತಿಯಾಗಿರುತ್ತದೆ. ಇದರಿಂದ ಸೀರೆ ಉಡತಕ್ಕ ಜನರಿಗೆ ಬಹಳ ತೊಂದರೆಯಾಗಿದೆ. ಆದ್ದರಿಂದ ಇದನ್ನು ತಪ್ಪಿಸುವುದಕ್ಕೆ ತಾವು ಕಾರ್ಯಕ್ರಮ ತೆಗೆದುಕೊಂಡಿದ್ದೀರಿ ?

ಶ್ರೀ ಎಸ್. ಬಿ. ನಾಗರಾಳ್ .—ಅದರ ಅನುಭವ ನನ್ನಗೆ ಇಲ್ಲ.

ಶ್ರೀ ಜಿ. ವೆಂಕಟಪ್ಪ .—ಕಳೆದ ವರ್ಷ ಇದೇ ಕಾಲದಲ್ಲಿ ರೇಶ್ಮೆ ಬೆಲೆ ತೀಕಡಾ ಳರಿಪಟ್ಟು ಕಡಿಮೆ ಇತ್ತು. ಇದರಿಂದಾಗಿ ರೇಶ್ಮೆ ವ್ಯವಸಾಯಗಾರರಿಗೆ ತಾವು ಮಾಡಿದಂತಹ ಖರ್ಚು ವೆಚ್ಚಗಳು ಸಹ ಹಿಂದಿರುಗಿ ಬರುತ್ತಿರಲಿಲ್ಲ ಇದು ಸರ್ಕಾರದ ಗಮನಕ್ಕೆ ಬಂದಿದೆಯೇ ? ಮತ್ತು ಈಗ ಮಳೆ ಸರಿಯಾಗಿ ಲ್ಲದೆ ಬೆಳೆ ಎಲ್ಲಾ ಕಟ್ಟಿದೆ. ಆದ್ದರಿಂದ ಇವುಗಳನ್ನು ತಪ್ಪಿಸುವುದಕ್ಕೋಸ್ಕರ ರೈತನ ಬೆಳೆ ಕೆಟ್ಟುಹೋದರೆ ಕಂಪೆನ್ಸೇಶನ್ ಕೊಡುವಂತಹ ಯೋಜನೆಯನ್ನು ಹಾಕಿ, ಒಂದು ರಕ್ಷಣೆ ಕೊಡತಕ್ಕ ಕಾರ್ಯಕ್ರಮ ಹಾಕಿ ಕೊಳ್ಳುತ್ತೀರಾ ?

ಶ್ರೀ ಎಸ್. ಬಿ. ನಾಗರಾಳ್ .—ಅದನ್ನು ಗಮನದಲ್ಲಿಟ್ಟುಕೊಳ್ಳುತ್ತೇವೆ.

ಶ್ರೀ ಎಂ. ಎಸ್. ಕೃಷ್ಣನ್ .—ತಾವು ಉತ್ತರದಲ್ಲಿ ಬ್ಯಾಂಕ್ ಬಗ್ಗೆ ಹೇಳಿದ್ದೀರಿ. ಆದರೆ ರೇಶ್ಮೆ ಬೆಲೆ ಜಾಸ್ತಿಯಾಗುವುದಕ್ಕೆ ಮುಖ್ಯವಾದ ಕಾರಣ ಈ ವಾಪಾರಸ್ಥರು ಆರ್ಟಿಫಿಶಿಯಲ್ ಸ್ಕೇರ್ಸಿಟಿ ಉಂಟು ಮಾಡುವುದರಿಂದ ಮತ್ತು ಸ್ಪೆಕ್ಯುಲೇಟ್ ಮಾಡುವುದರಿಂದ ಈ ರೀತಿಯಾಗುತ್ತದೆ. ಆದ್ದರಿಂದ ಇದಕ್ಕೆ ಬೇಕಾದ ಬಂದೋಬಸ್ತು ಮಾಡಿ, ತಕ್ಷಣ ಬೆಲೆ ಜಾಸ್ತಿಯಾಗದ ಹಾಗೆ ರಾ ಸಿಲ್ಕನ್ನು ಮಾರಾಟ ಮಾಡುವ ಹಕ್ಕೆ ಸಿಲ್ಕ್ ಬೋರ್ಡ್ ಮುಖಾಂತರ ಕಾರ್ಯಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಎಸ್. ಬಿ. ನಾಗರಾಳ್ .—ಅದರ ಬಗ್ಗೆ ಯಾವ ಕ್ರಮ ತೆಗೆದು ಕೊಂಡಿಲ್ಲ. ಇರತಕ್ಕಂತಹ ಸಿಲ್ಕನ್ನು ವ್ಯಾಪಾರಸ್ಥರು ಬಿಡುಗಡೆ ಮಾಡಬೇಕೆಂದು ಸರ್ಕಾರದವರು ಯಾವ ಕಾನೂನಿನಲ್ಲಿಯೂ ಹೇಳು ವುದಕ್ಕಾಗುವುದಿಲ್ಲ ಆದರೆ ಆ ರೀತಿ ಆಗಬಾರದು ಎಂಬ ಉದ್ದೇಶದಿಂದ ನಾವು ಒಂದು ಕಾರ್ಪೋರೇಶನ್ ಮಾಡಬೇಕೆಂದು ಮಾಡಿದ್ದೇವೆ. ಕಾರ್ಪೊರೇಶನ್ ಮಾಡಿದಾಗ ವ್ಯಾಪಾರಸ್ಥರು ತಮ್ಮಲ್ಲಿದ್ದ ಸಿಲ್ಕನ್ನು ಕಾರ್ಪೊರೇಶನ್ ಮುಖಾಂತರ ರಿಲೀಸ್ ಮಾಡುವುದಕ್ಕೆ ಒಳ್ಳೆಯದಾಗುತ್ತದೆಂದು ಸರ್ಕಾರದ ಅಭಿಪ್ರಾಯ.

ಶ್ರೀ ಪಿ. ಎಂ. ಬಂಗಿ .—ಈ ರಾ ಮೆಟೀರಿಯಲ್ಸ್ ಯಾವಾಗ, ಎಲ್ಲಿ ತೆಗೆಯುತ್ತೀರಿ ? ಮತ್ತು ಇಲ್ಲಿ ಸಿಲ್ಕ್ ನೂಲು ಕೊಡುತ್ತೀರೊ, ಅಥವಾ ಬೇರೆ ಏನಾದರೂ ಕೊಡುವ ವ್ಯವಸ್ಥೆ ಇದೆಯೇ ?

ಶ್ರೀ ಎಸ್. ಬಿ. ನಾಗರಾಳ್ .—ರಾ ಮೆಟೀರಿಯಲ್ಸ್ ಅಂದರೆ ಪ್ಯೂರ್ ಸಿಲ್ಕ್ ನೂಲು ಕೊಡುವು ದಕ್ಕೆ ಇರುವುದು. ಸೆಂಟ್ರಲ್ ಸಿಲ್ಕ್ ಬೋರ್ಡಿನವರು ಈ ದೆಸೆಯಲ್ಲಿ ಪ್ರೊಪೋಸಲ್ಸ್ ಕಳಿಸಿದ್ದಾರೆ.

ಶ್ರೀ ಕೆ. ಎಂ. ನಾಗಣ್ಣ.—ರೇಷ್ಮೆ ತಯಾರು ಮಾಡುವವರಿಗೆ ಮತ್ತು ಕೊಂಡುಕೊಳ್ಳುವವರಿಬ್ಬರಿಗೂ ನ್ಯಾಯ ಬೆಲೆ ಸಿಗುವ ಹಾಗೆ ಈ ಬ್ಯಾಂಕ್‌ನಲ್ಲಿ ರಾ ಮೆಟೀರಿಯಲ್ಸ್ ವ್ಯವಸ್ಥೆ ಮಾಡುತ್ತೀರಾ?

ಶ್ರೀ ಎಸ್. ಬಿ. ನಾಗರಾಳ್ .—ಬ್ಯಾಂಕ್ ಮಾಡಬೇಕಾದರೆ ಅದಕ್ಕೆ ಆರ್ಥಿಕ ವ್ಯವಸ್ಥೆ ಮೊದಲು ಮಾಡಬೇಕಾಗುತ್ತದೆ. ಅದರ ಬಗ್ಗೆ ಕೇಂದ್ರ ಸರ್ಕಾರಕ್ಕೆ ಸೆಂಟ್ರಲ್ ಸಿಲ್ಕ್ ಬೋರ್ಡಿನವರು ಶಿಫಾರಸು ಮಾಡಿದ್ದಾರೆ. ಅದು ಆದಾಗ ಮುಂದಕ್ಕೆ ಒಳ್ಳೆಯದಾಗುತ್ತದೆಂದು ನಾವು ಆಶೆ ಇಟ್ಟುಕೊಂಡಿದ್ದೇವೆ.

TAKING OVER OF T. D. B. AND OTHER ROADS

445. SRI S. KARIAPPA (Kanakapura).—

Will the Minister for Public Works and Electricity be pleased to state.—

(*a*) whether the Government have proposed to take up T.D.B. or other roads under control of Public Works Department ;

(*b*) if so, the names of roads they have proposed to take up under their control in Bangalore District (Taluk-wise information may be furnished)?

SRI H. M. CHANNABASAPPA (Minister for Public Works and Electricity).—

(*a*) and (*b*) This is under consideration of the Government.

ಶ್ರೀ ಎಸ್. ಕರಿಯಪ್ಪ.—ಈಗ ಯಾವಯಾವ ತಾಲೂಕು ಡೆವಲಪ್‌ಮೆಂಟ್ ಬೋರ್ಡಿನವರು ರಸ್ತೆಗಳನ್ನು ಮಾಡಬೇಕೆಂದು ಪ್ರೊಪೋಸಲ್ಸ್‌ಗಳನ್ನು ಕಳಿಸಿದ್ದಾರೆ?

‡ ಶ್ರೀ ಎಚ್ ಎಂ ಚನ್ನಬಸಪ್ಪ.—ಕೆಲವು ತಾಲ್ಲೂಕು ಡೆವಲಪ್‌ಮೆಂಟ್ ಬೋರ್ಡಿನವರೂ ಕಳಿಸಿದ್ದಾರೆ; ತಾವು ಕೂಡ ಕಳಿಸಿ ಕೊಟ್ಟಿದ್ದೀರಿ.

ಶ್ರೀ ಎಸ್ ಕರಿಯಪ್ಪ .—ಪ್ರತಿಯೊಂದು ತಾಲೂಕು ಏರಿಯಕ್ಕೂ ಎಷ್ಟು ಉದ್ದದ ರಸ್ತೆ ಇರಬೇಕೆಂದು ತಾವು ಆಲೋಚನೆ ಇಟ್ಟು ಕೊಂಡಿದ್ದೀರಿ?

ಶ್ರೀ ಎಚ್.ಎಂ. ಚನ್ನಬಸಪ್ಪ.—ನಾನು ಈಗಾಗಲೇ ತಿಳಿಸಿರುವ ಹಾಗೆ ಸರಾಸರಿ ಒಂದು ತಾಲ್ಲೂಕ್‌ಗೆ ೫೦ ಮೈಲಿ ರಸ್ತೆ ಮಾಡಬೇಕೆಂದಿದ್ದೇವೆ. ಆದರಲ್ಲಿ ಹೊಸ ರಸ್ತೆಗಳು, ಕೆಟ್ಟು ಹೋದ ರಸ್ತೆಗಳು, ಲಿಂಕ್ಸಿಂಗ್ ಲಿಂಕ್ಸ್, ಎಲ್ಲವೂ ಬರುತ್ತವೆ. ಎಲ್ಲಿ ಸ್ವಲ್ಪ ಕಡಿಮೆ ಇದೆ ಅಲ್ಲಿ ಸ್ವಲ್ಪ ಜಾಸ್ತಿಯಾಗಿ ಮಾಡಬೇಕು, ಮತ್ತು ಎಲ್ಲಿ ಸ್ವಲ್ಪ ಜಾಸ್ತಿ ಇದೆ ಅಲ್ಲಿ ಸ್ವಲ್ಪ ಕಡಿಮೆಯಾಗಬಹುದು, ಹೀಗೆ ಒಂದು ತಾರತಮ್ಯ ಇದ್ದುದನ್ನು ನೋಡಿ ಕೊಂಡು ಮಾಡಬೇಕೆಂದು ವ್ಯವಸ್ಥೆ ಮಾಡಿದ್ದೇವೆ.

ಶ್ರೀ ಗೋಪಿನಾಥ ಆರ್. ಸಾಂದ್ರ.—ನಿಮ್ಮ ಕಾರ್ಯಕ್ರಮ ಯಾವಾಗ ಕಾರ್ಯರೂಪದಲ್ಲಿ ಬರುತ್ತದೆ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಒಂದು ವಾರದೊಳಗೆ ಇದನ್ನು ಕಾರ್ಯರೂಪದಲ್ಲಿ ತರುತ್ತೇವೆ.

ಶ್ರೀ ಎಸ್.ಎಂ. ಶೀರನಾಳಿ ಚಂದ್ರಶೇಖರ್.—ಶಿವಮೊಗ್ಗ ಜಿಲ್ಲೆಯಲ್ಲಿ ಲಿಂಗನಮಕ್ಕಿ ಹೈ ಪವರ್ ಕಮಿಟಿ ಮಾಡಿರುವ ರಸ್ತೆಗಳನ್ನು ಪಿಡಬ್ಲ್ಯೂಡಿಯವರೂ ತೆಗೆದುಕೊಂಡಿಲ್ಲ. ಮತ್ತೆ ಹೈ ಪವರ್ ಕಮಿಟಿಯವರೂ ತೆಗೆದುಕೊಂಡಿಲ್ಲ. ಆದ್ದರಿಂದ ಅದನ್ನು ಪಿ ಡಬ್ಲ್ಯೂಡಿಯವರು ತೆಗೆದುಕೊಳ್ಳುವುದಕ್ಕೆ ವ್ಯವಸ್ಥೆ ಮಾಡುತ್ತೀರಾ?

ಶ್ರೀ ಎಚ್ ಎಂ ಚನ್ನಬಸಪ್ಪ.—ಇಂತಹ ರಸ್ತೆಗಳು ಅನೇಕ ಇವೆ. ಅವುಗಳ ಯೋಗ್ಯಾಯೋಗ್ಯತೆಯನ್ನು ಪರಿಶೀಲನೆ ಮಾಡಿ ಯಾವ್ಯಾವ ತಾಲೂಕುಗಳಲ್ಲಿ ಎಷ್ಟೆಷ್ಟು ತೆಗೆದುಕೊಳ್ಳಬೇಕೆಂದು ನಿಯಮಗಳನ್ನು ಮಾಡಿ, ತೆಗೆದುಕೊಳ್ಳಬೇಕಾಗುತ್ತದೆ.